**ದಿನಾಂಕ: 24-07-2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಯು ಎಂ ಸಿ ವಕೀಲರಿಂದ 2 ನೇ ಎದುರುದಾರರ ಪರವಾಗಿಃ**

4) ನಾನು ಹೋಗುತ್ತಿದ್ದ ಮೋಟಾರು ಸೈಕಲ್ ನನ್ನ ಹೆಸರಿನಲ್ಲಿಯೇ ಇರುತ್ತದೆ. ಅಪಘಾತವಾದ ದಿನ ಮೋಟಾರು ಸೈಕಲ್ ನ್ನು ನಾನೇ ಓಡಿಸುತ್ತಿದ್ದೆ. ನನಗೆ ಮೋಟಾರು ಸೈಕಲ್ ಚಾಲನೆ ಮಾಡಲು ಡಿ ಎಲ್ ಇರಲಿಲ್ಲ ಎನ್ನುವುದು ಸರಿಯಲ್ಲ. ಮೋಟಾರು ಸೈಕಲ್ ನ ವಿಮೆ ಚಾಲ್ತಿಯಲ್ಲಿ ಇರಲಿಲ್ಲ ಎನ್ನುವುದು ಸರಿಯಲ್ಲ. ಯಾವ ಕಂಪನಿಯ ವಿಮೆ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಡಿ ಎಲ್ ನ್ನು ಮೋಟಾರು ಸೈಕಲ್ ನ ವಿಮೆ ಮತ್ತು ಆರ್ ಸಿ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎನ್ನುವುದು ಸರಿ.

5) ಅಪಘಾತವಾದ ನಂತರ ನನ್ನ ಮೇಲೆ ಎಫ್ ಐ ಆರ್ ಆಗಿತ್ತು ಎಂದರೆ ಸರಿ. ಪರಿಹಾರ ಪಡೆಯುವ ಉದ್ದೇಶದಿಂದ ಪೊಲೀಸರೊಂದಿಗೆ ಶರೀಕಾಗಿ ನನಗೆ ಡಿ ಎಲ್ ಇಲ್ಲದೇ ಇದ್ದ ಕಾರಣ ಮತ್ತು ಮೋಟಾರು ಸೈಕಲ್ ಗೆ ವಿಮೆ ಇಲ್ಲದೇ ಇದ್ದ ಕಾರಣ ಕಾರಿನವರ ವಿರುದ್ದ ದೋ. ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

6) ಬೇಲೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಮತ್ತು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ. ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿಯೂ ಸಹ ಚಿಕಿತ್ಸೆ ಪಡೆದಿದ್ದೆ. ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ಆಗಾಗ ಬಂದು ತೋರಿಸಕೊಳ್ಳಬೇಕು ಮತ್ತು ವ್ಯಾಯಾಮ ಮಾಡಬೇಕು ಎಂದು ವೈದ್ಯರು ತಿಳಿಸಿದ್ದರು ಎಂದರೆ ಸರಿ. ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ಪುನಃ ಚಿಕಿತ್ಸೆ ಪಡೆದ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ಸರಿ.

7) ನಾನು ಹಾಜರುಪಡಿಸಿರುವ ಪಹಣಿಯಲ್ಲಿ ಈಗಲೂ ಬೆಳೆ ಬೆಳಯುತ್ತಿದ್ದೆ ಎಂದರೆ ಸರಿ. ನನ್ನ ಆದಾಯದ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಬಿಲ್ ಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಗಾಯಗಳು

ಗುಣವಾಗಿದೆ ಎಂದರೆ ಸರಿಯಲ್ಲ. ಅಪಘಾತ ನಾನೇ ಮಾಡಿಕೊಂಡು ಪರಿಹಾರ ಪಡೆಯಲು ಪೊಲೀಸರೊಂದಿಗೆ ಶರೀಕಾಗಿ ಕಾರಿನವರ ವಿರುದ್ದ ಕೇಸ್ ನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಎಂ ಎಸ್ ಶಶಿಕಲ)

ಸಾಕ್ಷಿದಾರರ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬೇಲೂರು .